ದೂರವಾಣಿ ಸಂಖ್ಯೆ: 080-22245073
ಫ್ಯಾಕ್ಸ್ ನಂ: 080 - 22291334

ಇ-ಮೇಲ್:-financialadviser.arkptcl@gmail.com
ವೆಬ್‌ಸೈಟ್: www.kptcl.karnataka.gov.in

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**Corporate Identity Number(CIN):U40109KA1999SGC025521**
**ನಿಗಮ ಕಾರ್ಯಾಲಯ, ಕಾವೇರಿ ಭವನ, ಬೆಂಗಳೂರು -560009.**

ಸಂಖ್ಯೆ: ಕವಿಪ್ರನಿನಿ/ಕೆಸಿಓ19/28960/2021-22 ದಿನಾಂಕ: 18 JAN 2022
ಲಗತ್ತು :

## ಸುತ್ತೋಲೆ

**ವಿಷಯ: ಕವಿಪ್ರನಿನಿಯ ಮಾರ್ಚ್-2022ರ ಅಂತಿಮ ಲೆಕ್ಕ ಪತ್ರಗಳನ್ನು ಏಪ್ರಿಲ್ 15, 2022 ರೊಳಗೆ ಸಲ್ಲಿಸುವ ಬಗ್ಗೆ.**

****

1. ಆರ್ಥಿಕ ವರ್ಷ 2021-22ರ ಲೆಕ್ಕಘಟಕಗಳ ಲೆಕ್ಕ ಪತ್ರಗಳನ್ನು ಏಪ್ರಿಲ್ 15, 2022ರೊಳಗೆ ಪಡೆದು ಅಂತಿಮಗೊಳಸಬೇಕಾಗಿರುತ್ತದೆ. ಇದರಿಂದ ಕಂಪನಿ ಕಾಯ್ದೆ-2013ರ ಪ್ರಕಾರ ಆಡಿಟ್ ಮತ್ತು ಇತರೆ ಪ್ರಕ್ರಿಯೆಯನ್ನು ನಿಗದಿತ ಸಮಯದಲ್ಲಿ ಅಂದರೆ ಸೆಪ್ಟೆಂಬರ್ 30ರೊಳಗೆ ಪೂರ್ಣಗೊಳಸಬೇಕಾಗಿರುವುದರಿಂದ, ತಮ್ಮ ಲೆಕ್ಕಘಟಕಗಳ ಗುಣಮಟ್ಟದ ಲೆಕ್ಕ ಪತ್ರಗಳನ್ನು ಸಲ್ಲಿಸಲು ಪ್ರತಿ ಕಛೇರಿಯ ಮುಖ್ಯಸ್ಥರು ಮತ್ತು ಲೆಕ್ಕ ಘಟಕಗಳ ಎಲ್ಲಾ ಸಂಬಂಧಪಟ್ಟ ತಾಂತ್ರಿಕ / ಹಣಕಾಸು ಅಧಿಕಾರಿಗಳ ಪ್ರಾಥಮಿಕ ಜವಾಬ್ದಾರಿಯಾಗಿರುತ್ತದೆ.

2. ಶಾಸನ ಬದ್ಧ ಲೆಕ್ಕ ಪರಿಶೋಧಕರು ಆರ್ಥಿಕ ವರ್ಷ 2019-20 ಮತ್ತು 2020-21ನೇ ಸಾಲಿನ ಲೆಕ್ಕ ಪತ್ರಗಳನ್ನು ಪರಿಶೀಲಿಸುವ ಸಮಯದಲ್ಲಿ ಬಹಳಷ್ಟು ನ್ಯೂನ್ಯತೆ ಕಂಡು ಬಂದಿದುದರಿಂದ ಕವಿಪ್ರನಿನಿಯ ಲೆಕ್ಕ ಪತ್ರಗಳನ್ನು ಸಮಯ ವಿಸ್ತರಣೆ ಪಡೆದು ಪೂರ್ಣಗೊಳಸುತ್ತಿರುವುದಕ್ಕೆ ಆಡಳತ ಮಂಡಳಯಿಂದ ಆಕ್ಷೇಪಣೆ ಬರುತ್ತಿದೆ. ಅದುದರಿಂದ ಆರ್ಥಿಕ ವರ್ಷ 2021-22ನೇ ಸಾಲಿನಲ್ಲಿ ಗುಣಮಟ್ಟದ ಅಂತಿಮ ಲೆಕ್ಕಗಳನ್ನು ಸಲ್ಲಿಸುವ ಬಗ್ಗೆ ಹಾಗೂ ಈ ಕೆಳಕಂಡ ವಿಷಯಗಳ ಕುರಿತು ಸೂಕ್ತ ಗಮನಹರಿಸುವುದು.

3. ಶಾಸನಬದ್ಧ ಲೆಕ್ಕ ಪರಿಶೋಧಕರು ವಾರ್ಷಿಕ ವರದಿಯನ್ನು ಪರಿಶೀಲಿಸಿ ಲೆಕ್ಕಪತ್ರ ನಿರ್ವಹಿಸುವಿಕೆಯಲ್ಲಿನ ಲೋಪದೋಷಗಳ ಬಗ್ಗೆ ಉಲ್ಲೇಖಿಸಿ ಪ್ರಮುಖವಾಗಿ

i)ಆಸ್ತಿ ಬಂಡವಾಳೀಕರಣದ ವಿಳಂಬದ ಬಗ್ಗೆ ಹಾಗೂ ಅದರಿಂದಾಗುವ ಪರಿಣಾಮಗಳ ಬಗ್ಗೆ ಗಮನ ಹರಿಸುವಂತೆ ಸಲಹೆ ನೀಡಿರುತ್ತಾರೆ. ಹಲವು ಸಂದರ್ಭದಲ್ಲಿ ಕವಿಪ್ರನಿನಿಯ ಆಸ್ತಿಗಳ ಬಂಡವಾಳೀಕರಣದ ನಂತರವು ಗುತ್ತಿಗೆದಾರರ/ಪೂರೈಕೆದಾರರ ಬಿಲ್‌ಗಳು ಬರುತ್ತಿದ್ದು, ಆಸ್ತಿಗಳ ಬಂಡವಾಳೀಕರಣದ ನಂತರ ಲೆಕ್ಕೀಕರಿಸಲಾಗಿರುವುದು ಹಾಗೂ ಇದರಿಂದ ಪ್ರತೀ ವರ್ಷವು ಕವಿಪ್ರನಿನಿಯ ಅಂಕಿ ಅಂಶಗಳನ್ನು ಪುನರುಚ್ಚರಿಸಲಾಗುತ್ತಿದೆ ಮತ್ತು ತಾಂತ್ರಿಕ ಅಧಿಕಾರಿಗಳು ಯೋಜನೆ ಕಾರ್ಯಗೊಂಡ (Commission Certificate) ದಿನಾಂಕದ ಮಾಹಿತಿಯನ್ನು ವಿಳಂಬವಾಗಿ ಲೆಕ್ಕಶಾಖೆಗಳಗೆ ನೀಡುತ್ತಿದ್ದಾರೆ ಎಂದು ಶಾಸನಬದ್ಧ ಲೆಕ್ಕ ಪರಿಶೋಧಕರು ಆಕ್ಷೇಪ ವ್ಯಕ್ತಪಡಿಸಿರುತ್ತಾರೆ. ಶಾಸನಬದ್ಧ ಲೆಕ್ಕ ಪರಿಶೋಧಕರ ಆಕ್ಷೇಪಣೆಯನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಹಾಗೂ Special condition of contract ಕಂಡಿಕೆ 5.6.2 ರ ಅನ್ವಯ ಗುತ್ತಿಗೆದಾರರು ವಿಳಂಬ ಮಾಡದೇ ಹುಂಡಿಗಳನ್ನು ಸಲ್ಲಿಸಲು ಕ್ರಮಕೈಗೊಳ್ಳುವುದು.

.....

ii) ಜನರಲ್ ಲೆಡ್ಜರ್‌ಗಳು, ಷೆಡ್ಯೂಲ್‌ಗಳು, ಸಿ-ರಿಜಿಸ್ಟರ್‌ಗಳು, ಆಸ್ತಿ ರಿಜಿಸ್ಟರ್‌ಗಳು ಇತ್ಯಾದಿಗಳಂತಹ ಹಸ್ತಚಾಲಿತ ಪುಸ್ತಕಗಳನ್ನು ನವೀಕರಿಸಲಾಗಿಲ್ಲ ಮತ್ತು ತಾಳೆಪಟ್ಟಿಯ ಲೆಕ್ಕ ಶೀರ್ಷಿಕೆಗಳಿಗೆ ತಾಳೆಯಾಗದಿರುವುದನ್ನು ಗಮನಿಸಿರುತ್ತಾರೆ. ಎಲ್ಲಾ ಲೆಕ್ಕ ಘಟಕಗಳು ತಾಳೆ ಪಟ್ಟಿಯ ಸಂಬಂಧಿತ ವಹಿವಾಟುಗಳನ್ನು ಎಕ್ಸೆಲ್ ತಂತ್ರಾಂಶದಲ್ಲಿ ನಿರ್ವಹಿಸುತ್ತಿದ್ದು, ಸದರಿ ತಾಳೆಪಟ್ಟಿಯ ಮೊತ್ತಕ್ಕೂ ಜನರಲ್ ಲೆಡ್ಜರ್‌ನ ಮೊತ್ತಕ್ಕೂ ಹೊಂದಾಣಿಕೆಯಾಗದಿರುವುದರಿಂದ ವ್ಯತ್ಯಾಸದ ಮಾಹಿತಿಯನ್ನು ಒದಗಿಸಲು ಹೆಚ್ಚು ಸಮಯ ತೆಗೆದುಕೊಳ್ಳುತ್ತಿದ್ದು, ಅದರ ಸಮನ್ವಯವನ್ನು ಸರಿಯಾಗಿ ಮಾಡದಿರುವುದನ್ನು ಶಾಸನ ಬದ್ಧ ಲೆಕ್ಕ ಪರಿಶೋಧಕರು ಗಮನಿಸಿದ ಮೇರೆಗೆ ಈ ಕಛೇರಿಯಿಂದ ಕೆಳಕಂಡ ಎಕ್ಸೆಲ್ ತಂತ್ರಾಂಶದ ಅನುಬಂಧಗಳನ್ನು ಮಿಂಚಂಚೆ ಮೂಲಕ ದಿನಾಂಕ: 09.08.2021 ರಂದು ಒದಗಿಸಲಾಗಿದೆ. ಅ) ಲೆಕ್ಕ ಶೀರ್ಷಿಕೆ 75 ನ್ನು ತಾಳೆ ಮಾಡುವುದು. ಆ) ಬಿಬಿಆರ್ 2020-21. ಇ) ಬಿ.ಆರ್ ರಿಜಿಸ್ಟರ್. ಈ) ರಿಪೇರಿ ಮತ್ತು ನಿರ್ವಹಣಾ ವೆಚ್ಚದ ರಿಜಿಸ್ಟರ್ (ವರ್ಕ್ ಕೋಡ್‌ವಾರು) ಉ) ಬಿಲ್ ಪಾಸ್ 2020-21. ಊ) ರಿಪೇರಿ ಮತ್ತು ನಿರ್ವಹಣಾ ವೆಚ್ಚದ ಮಾಹಿತಿಗಳು. ಸದರಿ ಅನುಬಂಧಗಳನ್ನು ಮಾರ್ಚ-2022ರ ಅಂತ್ಯಕ್ಕೆ ತಾಳೆಪಟ್ಟಿಗೆ ತಾಳೆ ಮಾಡಿ ವಿವರಗಳನ್ನು ಸರಿಯಾಗಿ ಭರ್ತಿ ಮಾಡಿ ಅಂತಿಮ ಲೆಕ್ಕ ಪತ್ರಗಳೊಂದಿಗೆ ಸಲ್ಲಿಸುವುದು.

4. ಉಪ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ) ರವರ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ-19/345/85-86 ದಿನಾಂಕ: 30.11.2019 ರಲ್ಲಿ ತಿಳಿಸಿರುವಂತೆ Self-execution works ಯೋಜನೆಗಳು ಕಾರ್ಯಗತಗೊಂಡ ನಂತರ ತಾಂತ್ರಿಕ ಅಧಿಕಾರಿಗಳು ಸಂಬಂಧಿಸಿದ ಸಂಸ್ಥೆಯೊಂದಿಗೆ ಜಂಟಿ ದಾಸ್ತಾನು (Joint inventory) ಪೂರ್ಣಗೊಳಿಸಿ ಆಸ್ತಿಗಳನ್ನು ಕವಿಪ್ರನಿನಿಗೆ ವಿಳಂಬವಿಲ್ಲದೆ ಹಸ್ತಾಂತರಗೊಳಿಸುವುದು. ಬಂಡವಾಳೀಕರಣಗೊಳಿಸಲು ಹಾಗೂ ಕಾಮಗಾರಿಗಳು ಕಾರ್ಯಗತವಾದೊಡನೆ ಲೆಕ್ಕಶಾಖೆಗೆ ಮಾಹಿತಿ ನೀಡಲು ಕ್ರಮ ಕೈಗೊಳ್ಳಲು ನಿರ್ದೇಶಿಸಿದೆ.

5. ಮಾರ್ಚ್-31ರ ಅಂತ್ಯಕ್ಕೆ ಇರುವಂತೆ ಅಧಿಕಾರಿ/ನೌಕರರ ವಿವರವನ್ನು ಕವಿಪ್ರನಿನಿ ಅಂತರ್‌ಜಾಲದಲ್ಲಿ ಕವಿಪ್ರನಿನಿ ಮತ್ತು ವಿಸಕಂಗಳ ಹುದ್ದೆಗಳ ವಿವರಗಳು ಮತ್ತು ಸಿಬ್ಬಂದಿಯ ದತ್ತಾಂಶದಲ್ಲಿ ತಪ್ಪಾಗಿ ವಿವರ ನಮೂದಿಸಿದರಿಂದ 2020-21 ರ ವಾರ್ಷಿಕ ಲೆಕ್ಕ ಪತ್ರಗಳ ಪರಿಶೀಲನೆಯ ಸಮಯದಲ್ಲಿ ಲೆಕ್ಕ ಪರಿಶೋಧನೆಗೆ ವಿವರವನ್ನು ನಿಗದಿತ ಸಮಯದಲ್ಲಿ ಸಲ್ಲಿಸಲು ಕಷ್ಟ ಸಾಧ್ಯವಾಯಿತು. ಆದುದರಿಂದ ಇನ್ನು ಮುಂದೆ ಈ ರೀತಿಯಾಗದಂತೆ ಎಚ್ಚರ ವಹಿಸುವುದು.

6. ಜನವರಿ-2022ರ ಅಂತ್ಯಕ್ಕೆ ಎಲ್ಲಾ ವಾಹಿವಾಟಿನ/ಮಾಹಿತಿಗಳನ್ನು ಫೆಬ್ರವರಿ 10, 2022ರೊಳಗೆ ಸಂಬಂಧಿಸಿದ ಶೆಡ್ಯೂಲ್/ರಿಜಿಸ್ಟರ್‌ಗಳಿಗೆ ದಾಖಲಿಸುವುದು ಮತ್ತು ಜನರಲ್ ಲೆಡ್ಜರ್‌ನ ಮೊತ್ತಕ್ಕೆ ತಾಳೆ ಮಾಡುವುದು.

7. ಮಾರ್ಚ್-2022ರ ಲೆಕ್ಕ ಪತ್ರಗಳನ್ನು ತಯಾರಿಸುವ ಸಂದರ್ಭದಲ್ಲಿ ಈ ಕಛೇರಿಯ ಸುತ್ತೋಲೆ ಸಂಖ್ಯೆ ಆ.ಸ (ಲೆ ಮತ್ತು ಸಂ)/ಕೆಸಿಬಿ-21/6936/10-11 ದಿನಾಂಕ 24.05.2010ರಲ್ಲಿ ತಿಳಿಸಿರುವಂತೆ ಕ್ರಮ ಕೈಗೊಳ್ಳುವುದು.

8. ಪ್ರಸರಣ ವಲಯದ ನಿಯಂತ್ರಣಾಧಿಕಾರಿ ಮತ್ತು ವೃತ್ತದ ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು ತಮ್ಮ ವ್ಯಾಪ್ತಿಯ ಎಲ್ಲಾ ಲೆಕ್ಕ ಘಟಕಗಳನ್ನು ಭೇಟಿ ಮಾಡಿ ತಪಾಸಣೆ ಮಾಡಿ ನ್ಯೂನ್ಯತೆಗಳನ್ನು ಸರಿಪಡಿಸಲು ಕ್ರಮ ಕೈಗೊಂಡು ಈ ಕಛೇರಿಗೆ ವರದಿ ನೀಡುವುದು.

9. **ಎಲ್ಲಾ ಲೆಕ್ಕಘಟಕಗಳು ಮಾರ್ಚ್ 2022ರ ಅಂತಿಮ ಲೆಕ್ಕಪತ್ರಗಳಿಗೆ ಸಂಬಂಧಿಸಿದ ಅಂತಿಮ ಲೆಕ್ಕ ಪತ್ರಗಳ ಅನುಬಂಧವನ್ನು ಮತ್ತು ಎಲ್ಲಾ ವ್ಯವಹಾರಗಳನ್ನು ಅಂದರೆ, ಶೆಡ್ಯೂಲ್‌ಗಳು, ಅಂತರ್ ಘಟಕ ಲೆಕ್ಕಗಳಿಗೆ ಸಂಬಂಧಿಸಿದ ವ್ಯವಹಾರ, ಜನರಲ್ ಲೆಡ್ಜರ್, ಸವಕಳ ಲೆಕ್ಕಾಚಾರ, ಆಸ್ತಿ ಮುಸ್ತಕಗಳು ಹಾಗೂ ಫೆಬ್ರವರಿ-2022ರ ಅಂತ್ಯಕ್ಕೆ ಇತರೆ ಲೆಕ್ಕಪತ್ರಗಳಿಗೆ ಸಂಬಂಧಿಸಿದ ವ್ಯವಹಾರಗಳನ್ನು ಪೂರ್ಣಸಿದ್ಧತೆಯೊಂದಿಗೆ ಫೆಬ್ರವರಿ-2022ರ ಅಂತ್ಯಕ್ಕೆ ಅಂತಿಮ ಲೆಕ್ಕ ಪತ್ರಗಳ ಅನುಬಂಧವನ್ನು ತಯಾರಿಸಿ ಮಾರ್ಚ್ 15, 2022ರೊಳಗೆ ಈ ಕಛೇರಿಗೆ ಸಲ್ಲಿಸುವುದು ಹಾಗೂ ನಂತರದ ಮಾರ್ಚ್ ವಹಿವಾಟುಗಳೊಂದಿಗೆ ಏಪ್ರಿಲ್ 15, 2022 ರೊಳಗೆ ಪ್ರತಿಯೊಂದು ಲೆಕ್ಕ ವಿಭಾಗಗಳು ಮಾರ್ಚ್-2022 ರ ಅಂತಿಮ ಲೆಕ್ಕಪತ್ರಗಳನ್ನು ಸಲ್ಲಿಸತಕ್ಕದ್ದು.**

| "ನಿರ್ದೇಶಕರು (ಹಣಕಾಸು) ರವರಿಂದ ಅನುಮೋದಿಸಲ್ಪಟ್ಟಿದೆ" |
|---|

**ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)**
**ಕವಿಪ್ರನಿನಿ.**

**ಪ್ರತಿ:**

1. ಆರ್ಥಿಕ ಸಲಹೆಗಾರರು (ಆಂ.ಪ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಬೆಂಗಳೂರುರವರ ಮಾಹಿತಿಗಾಗಿ.
2. ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)/(ಸಿಬ್ಬಂದಿ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಬೆಂಗಳೂರುರವರ ಮಾಹಿತಿಗಾಗಿ.
3. ಎಲ್ಲಾ ಮುಖ್ಯ ಇಂಜಿನಿಯರ್(ವಿದ್ಯುತ್) ಪ್ರಸರಣ ವಲಯ/ಎಸ್‌ಎಲ್‌ಡಿಸಿ, ಕವಿಪ್ರನಿನಿ,
4. ಎಲ್ಲಾ ನಿಯಂತ್ರಣಾಧಿಕಾರಿಗಳು, ಪ್ರಸರಣ ವಲಯ/ ಎಸ್‌ಎಲ್‌ಡಿಸಿ/ಟಿಬಿಸಿ, ಕವಿಪ್ರನಿನಿ,
5. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ) / ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ, ಕಾಮಗಾರಿ ವೃತ್ತ /ನಿರ್ವಹಣಾ ವೃತ್ತ / ಕಾಮಗಾರಿ ಮತ್ತು ಪ್ರಸರಣ ವೃತ್ತ / ಆರ್.ಟಿ ವೃತ್ತ / ಎಸ್‌ಎಲ್‌ಡಿಸಿ/ಟಿಬಿಸಿ ಕವಿಪ್ರನಿನಿ,
6. ಅಧೀಕ್ಷಕ ಇಂಜಿನಿಯರ್ (ವಿ),(ಐ.ಟಿ) ಗಣಕ ಶಾಖೆರವರ ಮಾಹಿತಿಗಾಗಿ ಹಾಗೂ ಕವಿಪ್ರನಿನಿಯ ಜಾಲತಾಣದ www.kptcl.karnataka.gov.in-->eprasaranna ದಲ್ಲಿ ಪ್ರಕಟಿಸಲು ಕೋರಿದೆ.
7. ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಪ್ರಸರಣ/ಹಣಕಾಸು/ಆ ಮತ್ತು ಮಾಸಂ) ರವರ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ ರವರ ಮಾಹಿತಿಗಾಗಿ.